ಚಾರ್ಲಿ ಸುಮಾರು ಇಪ್ಪತ್ತೆಂಟು ವಸ್ತುಗಳನ್ನು ಕೊಟ್ಟಿದ್ದ. ಅವುಗಳೆಲ್ಲದರ ಛಾಯಾಚಿತ್ರಗಳನ್ನು ತಿಮ್ಮಯ್ಯ ತೋರಿಸಿದ. ಕರಮಚಂದ ಆಸ್ಥೆಯಿಂದ ಎಲ್ಲಾ ಚಿತ್ರಗಳನ್ನು ವೀಕ್ಷಿಸಿದ. ನನ್ಗೆ ಅದರಲ್ಲಿ ಕುತೂಹಲ ಹುಟ್ಟಿಸುವಂತಹದೇನೂ ಗೋಚರಿಸಲಿಲ್ಲ. ಆ ವಸ್ತುಗಳೆಲ್ಲವನ್ನೂ ಗಣಕಯಂತ್ರದಲ್ಲಿದ್ದ ದಾಸ್ತಾನು ದಾಖಲೆ ಪುಸ್ತಕದಲ್ಲಿ ಸೇರಿಸಲಾಗಿತ್ತು. ಅದಕ್ಕೆ ಸಂಕೇತ ಸಂಖ್ಯೆಗಳನ್ನು ನೀಡುವುದು ಸಂಸ್ಥೆಯ ಕ್ರಮ. ಮಾರಾಟ ಮಾಡುವಾಗ ಆ ಸಂಕೇತ ಸಂಖ್ಯೆಯನ್ನೇ ಬಳಸಲಾಗುತ್ತದೆ. ಇದರಿಂದ ವಸ್ತು ಬಂದಿದ್ದು ಯಾವಾಗ, ಎಂದು ಮಾರಾಟವಾಯ್ತು ಇತ್ಯಾದಿ ಮಾಹಿತಿಗಳು ತಕ್ಷಣಕ್ಕೆ ದೊರಕುತ್ತವೆ. ಚಾರ್ಲಿಯಿಂದ ಕೊಂಡುಕೊಂಡ ವಸ್ತುಗಳಲ್ಲಿ ಹನ್ನೊಂದು ವಸ್ತುಗಳು ಮಾರಿ ಹೋಗಿದ್ದವು. ಆತ ಕೊಟ್ಟ ವಸ್ತುಗಳಲ್ಲಿದ್ದ ಎರಡೂ ಹೂದಾನಿಗಳು ವಿಕ್ರಯಗೊಂಡಿದ್ದವು! ಚಾರ್ಲಿ ಇರುವುದು ಚಿಕ್ಕಪೇಟೆಯ ಎರಡನೇ ಅಡ್ಡರಸ್ತೆಯ ನೂರಾಎಂಟು ಸಂಖ್ಯೆಯ ಮನೆಯಲ್ಲಿ ಎಂದು ಹೇಳಿದ ತಿಮ್ಮಯ್ಯ, ಆತನ ಚರವಾಣಿ ಸಂಖ್ಯೆಯನ್ನೂ ನೀಡಿದ. ಆಮೇಲೆ ಸ್ಯಾಮುಯೆಲ್ ಎನ್ನುವವನೊಬ್ಬ ಬಂದು, ಚಾರ್ಲಿಯಿಂದ ಕೊಂಡುಕೊಂಡ ವಸ್ತುಗಳಲ್ಲಿ ಯಾವುದೆಲ್ಲಾ ಮಾರಿ ಹೋಗಿವೆ, ಯಾರು ಕೊಂಡುಕೊಂಡವರು, ಯಾವುದೆಲ್ಲಾ ಉಳಿದಿವೆ ಅಂತ ವಿಚಾರಿಸ್ದ. ಆದ್ರೆ ತಾನು ಆತನಿಗೆ ಮಾಹಿತಿ ನಿರಾಕರಿಸಿದೆ ಅಂತ ತಿಮ್ಮಯ್ಯ ಸಾಧಿಸಿದ. ನಾವು ತಿಮ್ಮಯ್ಯನ ಚರವಾಣಿ ಸಂಖ್ಯೆ ಪಡೆದು, ಅಲ್ಲಿಂದ ನಿರ್ಗಮಿಸಿದೆವು.

"ತಿಮ್ಮಯ್ಯನು ಸ್ಯಾಮುಯೆಲ್‌ಗೆ ವಿಷ್ಯ ಹೇಳಲಿಲ್ಲವಾದ್ರೆ, ಆತ ಬಂದಿದ್ದನ್ನು ನಮ್ಗೇಕೆ ಹೇಳಿದ?"

ನಮ್ಮ ಕಾರು ಚಿಕ್ಕಪೇಟೆಯ ಹಾದಿ ಹಿಡಿದಿತ್ತು.

"ಮಾಹಿತಿ ನೀಡಿಲ್ಲ ಅನ್ನೋದು ಸುಳ್ಳು. ಆದ್ರೆ ನಮ್ಗೆ ಸ್ಯಾಮುಯೆಲ್ ಬಗ್ಗೆ ಗೊತ್ತಿರಬಹುದು ಅಂತ ಗುಮಾನಿಯಲ್ಲಿ ಅವ್ನ ಬಗ್ಗೆ ಹೇಳಿರಬೇಕು. ಇರಲಿ, ಈ ಚಾರ್ಲಿಯಿಂದ ಏನು ಸಿಗುತ್ತೆ ನೋಡೋಣ."

ಹತ್ತು ನಿಮಿಷಗಳಲ್ಲಿ ನಾವು ಚಿಕ್ಕಪೇಟೆ ತಲುಪಿದೆವು. ಅದು ಸದಾ ಜನರಿಂದ ಗಿಜಿಗುಡುವ ಜಾಗ. ಇಕ್ಕಟ್ಟಾದ ರಸ್ತೆ. ಎರಡೂ ಬದಿಗಳಲ್ಲಿ, ಹೂವು, ತರಕಾರಿ, ಹಣ್ಣು ಮಾರುವ ವ್ಯಾಪಾರಿಗಳು. ಚೌಕಾಶಿ ಮಾಡುತ್ತಿರುವ ಗಿರಾಕಿಗಳು. ನಮಗೆ ಚಾರ್ಲಿಯ ಮನೆ ಪತ್ತೆ ಮಾಡುವುದು ಕಷ್ಟವಾಗಲಿಲ್ಲ. ಗೇಟಿನ ಗೋಡೆಯಲ್ಲಿ ಸನ್‌ಫ್ಲವರ್ ಅಂತ ಮಾಸಲು ಫಲಕ. ನಮ್ಮ ಅದೃಷ್ಟ ಚೆನ್ನಾಗಿದ್ದಿರಬೇಕು. ಚಾರ್ಲಿ ಮನೆಗೆ ಬೀಗ ಹಾಕಿ, ಹೊರಡುವ ತರಾತುರಿಯಲ್ಲಿದ್ದ! ತುಸು ವಿಳಂಬವಾದ್ರೂ, ಆತ ನಮ್ಗೆ ಸಿಕ್ಕಿರಲಿಲ್ಲ!! ಸುಮಾರು ಎಪ್ಪತ್ತರ ಹರೆಯದ, ಸದೃಢ ಶರೀರದ ಆಸಾಮಿ, ಮೊಗದಲ್ಲಿ ಎದ್ದು ತೋರುವ ದಪ್ಪ ಮೀಸೆ. ಟೀಶರ್ಟು ತೊಟ್ಟು, ಷೂ ಧರಿಸಿ, ಯುವಕರನ್ನು ನಾಚಿಸುವಂತಿದ್ದ. ನಮ್ಮನ್ನು ಕಂಡು ಚೋದ್ಯದ ದೃಷ್ಟಿ ಬೀರಿದ. ನಮ್ಮ ಪರಿಚಯ ಹೇಳ್ದಾಗ, ದೊಡ್ಡದಾಗಿ ನಕ್ಕ ಚಾರ್ಲಿ.

"ಕರಮಚಂದ್! ನಿಮ್ ಬಗ್ಗೆ ಕೇಳಿದೀನಿ. ಒಳಗ್ಬನ್ನಿ."

ಸಾಧಾರಣ ಗಾತ್ರದ ಮನೆ. ಅಷ್ಟೇನೂ ವಿಶಾಲವಲ್ಲದ ಹಜಾರದ ಷೋಕೇಸಿನಲ್ಲಿ ಬಗೆಬಗೆಯ ಕಲಾಕೃತಿಗಳು. ಗೋಡೆಯಲ್ಲಿ ಸೇನೆಯ ಸಮವಸ್ತ್ರದಲ್ಲಿರೋ ಚಾರ್ಲಿಯ ದೊಡ್ಡದಾದ ಚಿತ್ರ. ನೇತಾಡಿಸಿಟ್ಟ ಕೆಲವು ಮೆಡಲ್ಲುಗಳು. ಕೆತ್ತನೆಗಳುಳ್ಳ ಸೊಗಸಾದ ಮರದ ಕುರ್ಚಿಗಳು.

"ನಾನೊಬ್ನೇ ಇರೋದು. ನನ್ ಹೆಂಡ್ತಿ ಟಿಕೇಟ್ ತೆಗೆದುಕೊಂಡು ಎರಡು ವರ್ಷ ಆಯ್ತು. ಮಗ ಅಮೆರಿಕದಲ್ಲಿ ಇದ್ದಾನೆ. ನಾನು ಅಲ್ಲಿಗೆ ಹೋಗೊ ಯೋಚ್ನೇಲಿ ಇದೀನಿ. ನೀವು ಬಂದಿದ್ದು ಒಳ್ಳೇದಾಯ್ತು. ಕುಡಿಯೋದಿಕ್ಕೆ ಕಂಪೆನಿ ಸಿಕ್ತು!" ಅಂತ ಹೇಳಿ ನಗು ಸಿಡಿಸಿದ.